# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1354 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18-12-2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಬಂದೀಖಾನೆಗಳ ಸುಧಾರಣೆಗೆ ಸಂಬಂಧಿಸಿದಂತೆ, ಕಳೆದ ಹತ್ತು ವರ್ಷಗಳಲ್ಲಿ ಉನ್ನತ ಮಟ್ಟದ ಸಮಿತಿಗಳಿಂದ ಇದುವರೆಗೆ ಎಷ್ಟು ವರದಿಗಳು ಸಲ್ಲಿಕೆಯಾಗಿವೆ; | ರಾಜ್ಯದ ಬಂದಿಖಾನೆಗಳ ಸುಧಾರಣೆಗೆ ಸಂಬಂಧಿಸಿದಂತೆ, ಕಳೆದ ಹತ್ತು ವರ್ಷಗಳಲ್ಲಿ ಒಟ್ಟು 07 ಸಮಿತಿಗಳನ್ನು ರಚಿಸಲಾಗಿರುತ್ತದೆ.<br>1. ಪಬ್ಲಿಕ್ ಆಡಿಟ್ ಕಮಿಟಿ.<br>2. ಹೈಪವರ್ಡ್ ಕಮಿಟಿ ಆನ್ ಅಪ್‌ಗ್ರೇಡೇಷನ್ ಅಂಡ್ ಸೆಕ್ಯುರಿಟಿ ಆಫ್ ಕರ್ನಾಟಕ ಪ್ರಿಸನ್ಸ್.<br>3. ಶ್ರೀ ಮುರುಗನ್ ಐ.ಪಿ.ಎಸ್ ರವರ ವರದಿ.<br>4. ಶ್ರೀ ವಿನಯ್ ಕುಮಾರ್, ನಿವೃತ್ತ ಐ.ಎ.ಎಸ್ ರವರ ಕಮಿಟಿ.<br>5. ಶ್ರೀ ಸೌಮೇಂದು ಮುಖರ್ಜಿ, ಐ.ಪಿ.ಎಸ್ ರವರ ವರದಿ.<br>6. ಶ್ರೀ ಚಂದ್ರುಗುಪ್ತ ಐ.ಪಿ.ಎಸ್ ರವರ ಕಮಿಟಿ.<br>7. ಶ್ರೀ ಆರ್.ಹಿತೇಂದ್ರ ಐ.ಪಿ.ಎಸ್ ರವರ ಕಮಿಟಿ. |
| (ಆ) | ಉನ್ನತ ಮಟ್ಟದ ಸಮಿತಿಗಳಿಂದ ಸಲ್ಲಿಕೆಯಾಗಿರುವ ವರದಿಗಳಲ್ಲಿ ಬಂದೀಖಾನೆಗಳ ಸುಧಾರಣೆಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸ್ಸುಗಳನ್ನು ಈಗಾಗಲೇ ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗಿದೆಯೇ; | ಮೇಲ್ಕಂಡ 1 ರಿಂದ 5 ಸಮಿತಿಗಳಿಂದ ವರದಿಯು ಸ್ವೀಕೃತವಾಗಿದ್ದು, ಸದರಿ ವರದಿಗಳ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ವಹಿಸಲಾಗಿದೆ ಹಾಗೂ ವಹಿಸಲಾಗುತ್ತಿದೆ.<br><br>ಮುಂದುವರೆದು, ಮೇಲಿನ ಕ್ರಮಾಂಕ: 6ರಲ್ಲಿನ ಶ್ರೀ ಚಂದ್ರುಗುಪ್ತ ಐ.ಪಿ.ಎಸ್ ರವರ ಕಮಿಟಿಯ ವರದಿಯು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ ಹಾಗೂ ಕ್ರಮಾಂಕ: 07ರಲ್ಲಿನ ಶ್ರೀ ಆರ್.ಹಿತೇಂದ್ರ ಐ.ಪಿ.ಎಸ್ ರವರ ಕಮಿಟಿಯ ವರದಿಯು ನಿರೀಕ್ಷಣೆಯಲ್ಲಿರುತ್ತದೆ. |

| | | |
|---|---|---|
| (ಇ) | ಶಿಫಾರಸ್ಸುಗಳನ್ನು ಇದುವರೆಗೆ ಅನುಷ್ಠಾನಕ್ಕೆ ತರಲಾಗಿರದಿದ್ದಲ್ಲಿ, ಅದಕ್ಕೆ ಕಾರಣಗಳೇನು ; | ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ, ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ. |
| (ಈ) | ಬಂದೀಖಾನೆಗಳಲ್ಲಿ ವ್ಯಾಪಕ ಸುಧಾರಣೆ ತರುವ ನಿಟ್ಟಿನಲ್ಲಿ ಅಲ್ಲಿನ ಸಮಸ್ಯೆಗಳ ನಿವಾರಣೆಗೆ ಜೈಲು ಆಡಳಿತದಲ್ಲಿ ಪಾರದರ್ಶಕತೆ ತರುವುದು ಮತ್ತು ಜೈಲು ಆಡಳಿತದಲ್ಲಿ ತಂತ್ರಜ್ಞಾನದ ಸಮರ್ಪಕ ಮತ್ತು ಪರಿಣಾಮಕಾರಿ ಬಳಕೆ ಆಗಬೇಕಿದ್ದು, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 1. ದಿನಾಂಕ: 10.11.2025 ರಂದು ಬೆಂಗಳೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರ ಹುದ್ದೆಗೆ ಪೊಲೀಸ್ ಅಧೀಕ್ಷಕರಾದ ಶ್ರೀ ಅಂಶು ಕುಮಾರ್, ಭಾ.ಪೊ.ಸೇ ರವರನ್ನು ನೇಮಿಸಲಾಗಿರುತ್ತದೆ.<br><br>2. ಪ್ರಸ್ತುತ ಇರುವ ಬೆಂಗಳೂರು ಕೇಂದ್ರ ಕಾರಾಗೃಹವನ್ನು 03 ಕೇಂದ್ರ ಕಾರಾಗೃಹಗಳನ್ನಾಗಿ 1) ಕೇಂದ್ರ ಕಾರಾಗೃಹ, ಶಿಕ್ಷಾ ಬಂದಿಗಳು, 2) ಕೇಂದ್ರ ಕಾರಾಗೃಹ, ವಿಚಾರಣಾ ಬಂದಿಗಳು ಹಾಗೂ 3) ಕೇಂದ್ರ ಕಾರಾಗೃಹ, ಮಹಿಳಾ ಬಂದಿಗಳು, ವಿಭಜಿಸಲು ಕ್ರಮವಹಿಸಲಾಗುತ್ತಿದೆ. ಇದರಿಂದ ಆಡಳಿತ ವಿಕೇಂದ್ರಿಕರಣ ಹಾಗೂ ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಮಾಡಲಾಗುವುದು.<br><br>3. ಒಂದೇ ಸ್ಥಳದಲ್ಲಿ 05 ವರ್ಷ ಹಾಗೂ ಮೇಲ್ಪಟ ಅಧಿಕಾರಿ / ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>4. ಕಾರಾಗೃಹದ ಹೊರ ಭಾಗದ ಉಸ್ತುವಾರಿ ಹೊಂದಿರುವ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆ.ಎಸ್.ಐ.ಎಸ್.ಎಫ್) ಅಧಿಕಾರಿ / ಸಿಬ್ಬಂದಿಗಳನ್ನು 06 ತಿಂಗಳಿಗೊಮ್ಮೆ ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.<br><br>5. ಖಾಲಿ ಇರುವ ಕೆ.ಎಸ್.ಐ.ಎಸ್.ಎಫ್ ಅಧಿಕಾರಿ / ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕೋರಲಾಗಿದೆ.<br><br>6. ಖಾಲಿ ಇರುವ ವೀಕ್ಷಕ ಹಾಗೂ ಜೈಲರ್ ಹುದ್ದೆಗಳನ್ನು ನೇಮಕಾತಿ ಮಾಡಲು ಕ್ರಮ ವಹಿಸಲಾಗಿರುತ್ತದೆ.<br><br>7. ಹೆಚ್ಚುವರಿಯಾಗಿ ಕಾರಾಗೃಹಕ್ಕೆ ಭದ್ರತಾ ಉಪಕರಣಗಳಾದ ಸಿ.ಸಿ.ಟಿ.ವಿಗಳು ಮತ್ತು ಬ್ಯಾಗೇಜ್ ಸ್ಕ್ಯಾನರ್‌ಗಳನ್ನು ಖರೀದಿಸಲು ಕ್ರಮವಹಿಸಲಾಗುತ್ತಿದೆ.<br><br>8. ಹೆಚ್ಚುವರಿಯಾಗಿ ಕಾರಾಗೃಹದ ಬಂದಿಗಳಿಗೆ ಸಂವಾಹನೆ ಮಾಡುವ ಸಲುವಾಗಿ Prison Call Systems (Land Phones) ಖರೀದಿಸಲು ಟೆಂಡರ್ ಕರೆಯಲಾಗಿದೆ. |

| | | |
|---|---|---|
| | | 9. ಪ್ರಸ್ತುತ ಇರುವ ಕೇಂದ್ರ ಕಾರಾಗೃಹಕ್ಕೆ ಹೊಂದಿಕೊಂಡಿರುವಂತೆ ನೂತನ ಭದ್ರತಾ ಕೇಂದ್ರ ಕಾರಾಗೃಹವನ್ನು ನಿರ್ಮಿಸಲಾಗಿದ್ದು, ಶೀಘ್ರದಲ್ಲೇ ಆರಂಭಿಸಲು ಕ್ರಮವಹಿಸಲಾಗುವುದು. ಸದರಿ ಕಾರಾಗೃಹದಲ್ಲಿ ಭಯೋತ್ಪಾದಕ ಬಂದಿಗಳು, ನಕ್ಸಲ್ ಬಂದಿಗಳು, ಭೂಗತಪಾತಕಿ ಬಂದಿಗಳು, ರೂಢಾಪರಾಧಿ ಬಂದಿಗಳು, ರೌಡಿ ಬಂದಿಗಳು ಮತ್ತು ಇತರೆ ಯಾವುದೇ ರೀತಿಯಲ್ಲಿ ಭದ್ರತೆ ದೃಷ್ಟಿಯಿಂದ ಇಡಬಹುದಾದಂತಹ ಬಂದಿಗಳನ್ನು ಪ್ರತ್ಯೇಕಿಸಿ, ಹೆಚ್ಚಿನ ಭದ್ರತೆಯಲ್ಲಿ ದಾಖಲುಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>10. ಶಿವಮೊಗ್ಗ ಕೇಂದ್ರ ಕಾರಾಗೃಹದ ಆವರಣದಲ್ಲಿ ಕೇಂದ್ರ ಗೃಹ ಮಂತ್ರಾಲಯದಿಂದ ಮಂಜೂರಾಗಿರುವ ಗರಿಷ್ಠ ಭದ್ರತಾ ಕಾರಾಗೃಹದ ಕಾಮಗಾರಿಯನ್ನು ಈಗಾಗಲೇ ಆರಂಭಿಸಲಾಗಿದ್ದು, ಪೂರ್ಣಗೊಂಡ ನಂತರ ಇಲ್ಲಿಯೂ ಸಹ ರಾಜ್ಯದ ಕಾರಾಗೃಹಗಳಲ್ಲಿ ದಾಖಲಾಗುವ ಭಯೋತ್ಪಾದಕ ಬಂದಿಗಳನ್ನು, ನಕ್ಸಲ್ ಬಂದಿಗಳನ್ನು, ಭೂಗತಪಾತಕಿ ಬಂದಿಗಳನ್ನು, ರೂಢಾಪರಾಧಿ ಬಂದಿಗಳನ್ನು, ರೌಡಿ ಬಂದಿಗಳನ್ನು, ಹೆಚ್ಚಿನ ಭದ್ರತೆಯಲ್ಲಿ ದಾಖಲು ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>11. ಕಾರಾಗೃಹ ಮತ್ತು ಸುಧಾರಣಾ ಸೇವಾ ಪ್ರಧಾನ ಕಛೇರಿಯಲ್ಲಿ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ವೀಕ್ಷಿಸಲು Command Center ಅನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.<br><br>12. ರಾಜ್ಯದ ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ ಭದ್ರತಾ ಉಪಕರಣಗಳನ್ನು Security Audit ಮಾಡಲು ಕ್ರಮವಹಿಸಲಾಗುತ್ತಿದೆ.<br><br>13. ಇಲಾಖೆಯ ಹಿರಿಯ ಅಧಿಕಾರಿಗಳು ರಾಜ್ಯದ ಎಲ್ಲಾ ಕಾರಾಗೃಹಗಳಿಗೆ ಮೇಲಿಂದ ಮೇಲೆ ಭೇಟಿ ಮತ್ತು ಪರಿವೀಕ್ಷಣೆ ಕೈಗೊಳ್ಳಲಾಗುತ್ತಿದೆ.<br><br>14. ಪೊಲೀಸ್ ಇಲಾಖಾ ವತಿಯಿಂದ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಅನಿರೀಕ್ಷಿತ ತಪಾಸಣೆಯನ್ನು ಮಾಡಲಾಗುವುದು. |

15. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು, ಕಾರಾಗೃಹಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಆಡಳಿತ ಮತ್ತು ಭದ್ರತೆಯ ಕುರಿತು ವರದಿಯನ್ನು ನೀಡಲು ತಿಳಿಸಲಾಗಿರುತ್ತದೆ.

16. ಬೀದರ್ ಹಾಗೂ ವಿಜಯಪುರದಲ್ಲಿ ನಿರ್ಮಿಸಲಾಗುತ್ತಿರುವ ನೂತನ ಕೇಂದ್ರ ಕಾರಾಗೃಹಗಳನ್ನು ಶೀಘ್ರದಲ್ಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

17. ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿ, ಬಂದಿಗಳ ಚಲನವಲನಗಳ ಮೇಲೆ ಇನ್ನೂ ಹೆಚ್ಚಿನ ನಿಗಾವಹಿಸಲು ಮೊದಲ ಹಂತವಾಗಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಆಧುನಿಕ ತಂತ್ರಜ್ಞಾನ ಹೊಂದಿರುವ AI-powered Audio-Video Analytics system ಸಿಸಿಟಿವಿ ಕಣ್ಗಾವಲು ವ್ಯವಸ್ಥೆಯನ್ನು ಇ-ದರಖಾಸ್ತು ಮೂಲಕ ಕ್ರಮವಹಿಸಿ ಅಳವಡಿಸಲಾಗಿದೆ. ಸದರಿ ಕಣ್ಗಾವಲು ವ್ಯವಸ್ಥೆಯನ್ನು ಎಲ್ಲಾ ಕಾರಾಗೃಹಗಳಿಗೂ ವಿಸ್ತರಿಸಲಾಗುವುದು.

18. ರಾಜ್ಯದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ ಮತ್ತು ಮಂಗಳೂರು ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್‌ಗಳನ್ನು ದುರಸ್ಥಿ ಮತ್ತು ಮೇಲ್ದರ್ಜೆಗೇರಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಬೆಂಗಳೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ ಮತ್ತು ಮಂಗಳೂರು ಕಾರಾಗೃಹಗಳಲ್ಲಿ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದ್ದು, ಮೈಸೂರು ಕೇಂದ್ರ ಕಾರಾಗೃಹದಲ್ಲಿನ ಜಾಮರ್‌ಗಳ ದುರಸ್ಥಿ ಮತ್ತು ಮೇಲ್ದರ್ಜೆ ಕಾರ್ಯ ಅಂತಿಮ ಹಂತದಲ್ಲಿರುತ್ತದೆ.

19. ಕಾರಾಗೃಹಗಳಲ್ಲಿ ಬಂದಿಗಳು ಅಕ್ರಮವಾಗಿ ಮೊಬೈಲ್ ಫೋನ್‌ಗಳನ್ನು ಬಳಸದಂತೆ ತಡೆಗಟ್ಟಲು ಮೊಬೈಲ್ ಸಿಗ್ನಲ್‌ಗಳು

| | | |
|---|---|---|
| | | ದೊರಕದಂತೆ ಮಾಡಲು ಕೇಂದ್ರ ಗೃಹ ಮಂತ್ರಾಲಯದ ಶಿಫಾರಸ್ಸಿನನ್ವಯ ಮೊದಲ ಹಂತವಾಗಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 03 ಸಂಖ್ಯೆ "Towers of Harmonius Call Blocking System (T-HCBS)" ತಂತ್ರಜ್ಞಾನವುಳ್ಳ ಟವರ್‌ಗಳನ್ನು ಅಳವಡಿಸಲಾಗಿರುತ್ತದೆ.<br><br>20. ಕಾರಾಗೃಹಗಳಲ್ಲಿ ಮೊಬೈಲ್ ಫೋನ್‌ಗಳು ಮತ್ತು ಇತರೆ ಯಾವುದೇ ರೀತಿಯ ನಿಷೇಧಿತ ವಸ್ತುಗಳ ಕಳ್ಳ ಸಾಗಾಣಿಕೆಯನ್ನು ಹಾಗೂ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವ ಸಲುವಾಗಿ ಕಾರಾಗೃಹದೊಳಗೆ ಪ್ರವೇಶಿಸುವ ಮತ್ತು ಹೊರಬರುವ ವ್ಯಕ್ತಿಗಳನ್ನು ಹಾಗೂ ವಸ್ತುಗಳನ್ನು ಪರಿಶೀಲಿಸಲು ಅತ್ಯಾಧುನಿಕ ಮಾದರಿಯ ತಪಾಸಣಾ ಉಪಕರಣಗಳಾದ X-ray Baggage Scanner, FG-1 Security Pole, HHMD, DFMD, DSMD ಹಾಗೂ Non Linear Junction Detector (NLJD) ಗಳನ್ನು ಒದಗಿಸಲಾಗಿರುತ್ತದೆ.<br><br>21. 2024-25 ನೇ ಸಾಲಿನಲ್ಲಿ ರಾಜ್ಯದ ವಿವಿಧ ಕಾರಾಗೃಹಗಳ ಆಡಳಿತ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಅಗತ್ಯವಿರುವ ಒಟ್ಟು 279 ಸಂಖ್ಯೆ ಬಾಡಿವೋರ್ನ್ ಕ್ಯಾಮೆರಾ ಮತ್ತು 37 ಸಂಖ್ಯೆ ಡಾಕಿಂಗ್ ಸ್ಟೇಷನ್ ಉಪಕರಣಗಳನ್ನು ಇ-ದರಖಾಸ್ತು ಮೂಲಕ ಖರೀದಿಸಿ ಸರಬರಾಜು ಮಾಡಲಾಗಿರುತ್ತದೆ.<br><br>22. ರಾಜ್ಯದ ಕಾರಾಗೃಹಗಳಲ್ಲಿರುವ ಬಂದಿಗಳ ಚಲನ ವಲನಗಳ ಮೇಲೆ ಸೂಕ್ಷ್ಮವಾಗಿ ನಿಗಾವಹಿಸಲು ಅಗತ್ಯವಿರುವ ಸಿಸಿಟಿವಿ ಕ್ಯಾಮೆರಾ ಮತ್ತು ಪೂರಕ ಪರಿಕರಗಳನ್ನು ಅಳವಡಿಸಲಾಗಿದೆ.<br>23. 2024-25 ನೇ ಸಾಲಿನಲ್ಲಿ ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆಗೆ ಅಗತ್ಯವಿರುವ 19 ಸಂಖ್ಯೆ X-ray Baggage Scanner & 350 ವಾಕಿಟಾಕಿ ಉಪಕರಣಗಳನ್ನು ಖರೀದಿಸಿ ಒದಗಿಸಲಾಗಿದೆ. |

| | | |
|---|---|---|
| (ಉ) | ಬಂದೀಖಾನೆಗಳು ಪರಿವರ್ತನೆಯ ಕೇಂದ್ರಗಳಾಗಬೇಕು ಅಪರಾಧಿಯು ಶಿಕ್ಷೆ ಮುಗಿಸಿ ಜೈಲಿನಿಂದ ಹೊರಬರುವಾಗ ಮನಪರಿವರ್ತನೆ ಹೊಂದಿ ಸಮಾಜದಲ್ಲಿ ಉತ್ತಮ ನಾಗರೀಕನಾಗಿ ಬಾಳಬೇಕು ಎಂಬ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ವಿಶೇಷ ಸುಧಾರಣಾ ಕ್ರಮಗಳೇನು ? | 1. ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗ ಸೂಚಿಗಳ ಪ್ರಕಾರ ವರ್ಷಕ್ಕೆ 03 ಬಾರಿ ಜೀವಾವಧಿ ಶಿಕ್ಷಾಬಂದಿಗಳನ್ನು ಸನ್ನಡತೆಯ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಮಾಡಲಾಗುತ್ತಿರುತ್ತದೆ.<br><br>2. ಕಾರಾಗೃಹಗಳ ನಿಯಮಾನುಸಾರ ಶಿಕ್ಷಾಬಂದಿಗಳು ಕಾರಾಗೃಹದಲ್ಲಿ ನಿರ್ವಹಿಸುವ ಕೆಲಸಗಳಿಗೆ ಅನುಗುಣವಾಗಿ ಮತ್ತು ಗುಣ ನಡತೆಗಾಗಿ ಮಾಫಿಯನ್ನು ಮಂಜೂರು ಮಾಡಲಾಗುತ್ತಿರುತ್ತದೆ. ಇದರಿಂದ ಶಿಕ್ಷೆಯ ಪ್ರಮಾಣವು ಕಡಿತಗೊಂಡು ಶಿಕ್ಷಾ ಬಂದಿಗಳು ಅವಧಿಪೂರ್ವ ಬಿಡುಗಡೆ ಹೊಂದಲು ಸಹಕಾರಿಯಾಗುತ್ತಿರುತ್ತದೆ.<br><br>3. ಅಪರಾಧಿಯು ಶಿಕ್ಷೆ ಮುಗಿಸಿ ಕಾರಾಗೃಹದಿಂದ ಹೊರಬರುವಾಗ ಮನಪರಿವರ್ತನೆ ಹೊಂದಿ ಸಮಾಜದಲ್ಲಿ ಉತ್ತಮ ನಾಗರಿಕನಾಗಿ ಬಾಳಬೇಕು ಎಂಬ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಬಂದಿಗಳಿಗೆ ಶಿಕ್ಷಣ, ಯೋಗ-ಧ್ಯಾನ ಮತ್ತು ವಿವಿಧ ಕೌಶಲ್ಯ/ವೃತ್ತಿ ತರಬೇತಿ ನೀಡಿ ಬಿಡುಗಡೆ ನಂತರ ಉತ್ತಮ ನಾಗರಿಕರನ್ನಾಗಿಸುವ ನಿಟ್ಟಿನಲ್ಲಿ ಇಲಾಖೆಯು ಕಾರ್ಯನಿರ್ವಹಿಸುತ್ತದೆ. |

**ಸಂಖ್ಯೆ: ಹೆಚ್‌ಡಿ 372 ಪಿಆರ್‌ಎ 2025**

**( ಡಾ: ಜಿ.ಪರಮೇಶ್ವರ )**

ಗೃಹ ಸಚಿವರು.